# *Form No.4.*

# *Deposition Sheet( R.P.52)*

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**CC :11/2024**

**CW11**

**PW10**

| | | |
|---|---|---|
| ಸಾಕ್ಷಿಯ ಹೆಸರು | ಃ | ಪ್ರದೀಪ್ ಕುಮಾರ್ |
| ತಂದೆ ಹೆಸರು | ಃ | ಶೇಖರ್ ಪೂಜಾರಿ |
| ಪ್ರಾಯ | ಃ | 40 ವರ್ಷ |
| ಉದ್ಯೋಗ | ಃ | ಚಾಲಕ |
| ವಾಸ | ಃ | ಶಿರ್ಲಾಲು |

ದಿನಾಂಕ : **28.03.2025** ರಂದು ಪಿಡಬ್ಲ್ಯೂ - 10/ಸಿಡಬ್ಲ್ಯೂ - 11 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಹಿರಿಯ ಸ.ಸ.ಅ. ರವರಿಂದಃ

2020 ರಲ್ಲಿ ನಾನು ಅಜೆಕಾರಿನ ಸೌತ್ ಇಂಡಿಯಾ ಕ್ಯಾಶ್ಯೂ ಫ್ಯಾಕ್ಟರಿಯಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದೆ. ಆ ಸಮಯದಲ್ಲಿ ಗೇರುಬೀಜಗಳ ಕಳ್ಳತನವಾಗಿರುತ್ತದೆ. ದಿನಾಂಕ ನೆನಪಿಲ್ಲ. ಪೋಲೀಸರು ನನ್ನನ್ನು ಠಾಣೆಗೆ ಕರೆಸಿ

ವಿಚಾರಣೆ ಮಾಡಿದ್ದರು. ಅಲ್ಲಿ ನನಗೆ ಆರೋಪಿತರನ್ನು ತೋರಿಸಿದ್ದರು. ಆದರೆ ಅವರನ್ನು ಗುರುತಿಸಲು ಆಗುವುದಿಲ್ಲ. ನಂತರ ನನ್ನನ್ನು ಠಾಣೆಗೆ ಕರೆಸಿರುವುದಿಲ್ಲ. ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ. ಈಗ ನನಗೆ ನಿಪಿ - 9 ನ್ನು ತೋರಿಸಿದ್ದು, ಅದರಲ್ಲಿನ ನನ್ನ ಸಹಿಯನ್ನು ಗುರುತಿಸಿದ್ದು, ಅದನ್ನು ನಾನು ಠಾಣೆಯಲ್ಲಿ ಮಾಡಿರುತ್ತೇನೆ. ನನ್ನ ಸಹಿಯನ್ನು ನಿಪಿ - 9(ಬಿ) ಎಂದು ಗುರುತಿಸಲಾಯಿತು. ನಿಪಿ - 9 ರಲಿಲ ಏನು ಬರೆದಿದೆ ಎಂದು ನನಗೆ ತಿಳಿದಿಲ್ಲ.ರ ಈಗ ನನಗೆ ತೋರಿಸಿದ ನಿಪಿ- 10 ರಲ್ಲಿ ನಾನು ಕಾಣುತ್ತಿದ್ದೇನೆ. ಸದರಿ ಫೋಟೋವನ್ನು ನಮ್ಮ ಫ್ಯಾಕ್ಟರಿಯಲ್ಲಿ ತೆಗೆಯಲಾಗಿದೆ. ನಿಪಿ -10 ನ್ನು ಕಳ್ಳತನದ ವಿಚಾರವಾಗಿ ತೆಗೆದಿದ್ದು, ಆ ಸಮಯದಲ್ಲಿ ಪೋಲೀಸರು , ಚಾಸಾ 1 ಮತ್ತು ಇಬ್ಬರು ಆರೋಪಿತರು ಇದ್ದರು. ಆರೋಪಿತರು ನನ್ನ ಸಮಕ್ಷಮ ಯಾವುದೇ ಹೇಳಿಕೆ ನೀಡಿರುವುದಿಲ್ಲ.

ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಹಿರಿಯ ಸ.ಸ.ಅ. ರವರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.

CC 11/2024
CW11
PW10

<u>ಪಾಟೀ ಸವಾಲುಃ</u> ಹಿರಿಯ ಸ.ಸ.ಅ. ರವರಿಂದಃ

ದಿಃ 14.10.2020 ರಂದು ಬೆಳಗ್ಗಿನ ಜಾವಾ ಸುಮಾರು 2.30 ರ ಸಮಯದಲ್ಲಿ ಕಳ್ಳತನವಾಗಿರುತ್ತದೆ ಎಂದರೆ ಸರಿ. ನಮ್ಮ ಫ್ಯಾಕ್ಟರಿಯ ಪಶ್ಚಿಮ ದಿಕ್ಕಿನಲ್ಲಿ ಶೆಟರ್ ಇರುತ್ತದೆ ಎಂದರೆ ಸರಿ. ಕಳ್ಳರು ನಮ್ಮ ಫ್ಯಾಕ್ಟರಿಯ ಪಶ್ಚಿಮ ದಿಕ್ಕಿನಲ್ಲಿರುವಂತಹ ಬಾಗಿಲಿನ ಶೆಟರ್ ನ ಮೇಲ್ಬಾಗದ ಗೋಡೆಯಲ್ಲಿ ಇದ್ದಂತಹ ಜಾಗದಿಂದ ಒಳ ಪ್ರವೇಶಿಸಿ, ಅದೇ ಜಾಗದಿಂದ ಗೇರುಬೀಜವನ್ನು ಕಳವು ಮಾಡಿದ್ದಾರೆ ಎಂದು ನನಗೆ ತಿಳಿದಿದೆ ಎಂದರೆ ಸರಿಯಲ್ಲ. ನಂತರ ನಮ್ಮ ಮ್ಯಾನೇಜರ್ ರವರು ಸದರಿ ಸ್ಥಳವನ್ನು ಮುಚ್ಚಿಸಿರುತ್ತಾರೆ ಎಂದರೆ ಸರಿ. ಈ ವಿಚಾರವಾಗಿ ಚಾಸಾ 1 ರವರು ದೂರನ್ನು ನೀಡಿದ್ದು, ದಿಃ 28.10.2020 ರಂದು ನಾನು ಪೋಲೀಸರ ಸಮಕ್ಷಮ ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ದಿಃ 17.11.2020 ರಂದು ಪೋಲೀಸರು ನನ್ನನ್ನು ಮತ್ತು ಚಾಸಾ 8 ರವನ್ನು ಠಾಣೆಗೆ ಕರೆಸಿದ್ದರು ಎಂದರೆ ಸರಿ. ಆ ಸಮಯದಲ್ಲಿ ಇಬ್ಬರು ಆರೋಪಿತರು ತೋರಿಸಿ, ಅವರು ತಾವು ಕಳ್ಳತನ ಮಾಡಿದ ಸ್ಥಳವನ್ನು ತೋರಿಸಿದ್ದು, ಸದರಿ ಸ್ಥಳದಲ್ಲಿ ನಿಪಿ - 9 ರಂತೆ ಮಹಜರನ್ನುತಯಾರಿಸಿ, ನಿಪಿ -10 ರಂತೆ ಪೋಟೋ ತೆಗೆದಿದ್ದಾರೆ ಎಂದರೆ ಸರಿ. ಅದಕ್ಕೆ ಸಂಬಂಧಿಸಿದಂತೆ ಅದೇ ದಿನ ಅಂದರೆ ದಿಃ 17.11.2020 ರಂದ ನಾನು ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ಸದರಿ ದಿನ ಈಗ ನ್ಯಾಯಾಲಯದ ಮುಂದೆ

CC 11/2024
CW11
PW10

ಇರುವ 1 ನೇ ಆರೋಪಿಯನ್ನು ಹಾಗೂ ಈಗ ಹಾಜರಿರದ 2 ನೇ ಆರೋಪಿಯನ್ನು ನನಗೆ ತೋರಿಸಿದ್ದರು ಎಂದರೆ ನನಗೆ ನೆನಪಿಲ್ಲ. ಅವರ ಹೆಸರು ಉಮರ್ ಫಾರೂಕ್ ಮತ್ತು ಮಹಮ್ಮದ್ ಬಶೀರ್ ಎಂದಿರುತ್ತದೆ ಎಂದರೆ ಸರಿ. ನಿಪಿ -10 ರಲ್ಲಿ ಕಂಡು ಬರುವ ಆರೋಪಿ ಈಗ ನ್ಯಾಯಾಲಯದಲ್ಲಿ ಇದ್ದಾರೆ ಎಂದರೆ ನನಗೆ ಗೊತ್ತಾಗುವುದಿಲ್ಲ. ಆರೋಪಿಯನ್ನು ಗುರುತಿಸಿದ್ದರೂ ಸಹಾ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಹೇಳುತಿತತದ್ದೇನೆ ಎದಲರೆ ಸರಿಯಲ್ಲ.

ನಂತರ ದಿಃ 05.01.2021 ರಂದು ಪೋಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು ಎಂದರೆ ನೆನಪಿಲ್ಲ. ಅಲ್ಲಿ 3 ನೇ ಆರೋಪಿಯನ್ನು ನನಗೆ ತೋರಿಸಿದ್ದರು ಎಂದರೆ ಸರಿ. ಅದರ ಬಗ್ಗೆ ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲುಃ ಶ್ರೀ ಪಿ.ಎ.ಎಸ್. 1 ನೇ ಆರೋಪಿತರ ಪರ ವಕೀಲರಿಂದಃ

ನಾನು ಈಗಲೂ ಅದೇ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಎಷ್ಟು ಗೇರುಬೀಜಗಳು ಕಳುವಾಗಿದೆ ಅಥವಾ ಕಳುವಾಗಿದೆಯೇ ಇಲ್ಲವೋ ಎಂದು ನನಗೆ ಗೊತ್ತಾಗುವುದಿಲ್ಲ. ಆರೋಪಿತರು ಎಲ್ಲಿಂದ, ಹೇಗೆ ಬಂದಿರುತ್ತಾರೆ ಮತ್ತು ಹೇಗೆ ಕಳ್ಳತನ ಮಾಡಿರುತ್ತಾರೆ ಎಂದು ನನಗೆ ತಿಳಿದಿಲ್ಲ. ಪೋಲಿಸರೂ ನಮ್ಮನ್ನು

ಕರೆದು ಇವರೇ ಆರೋಪಿತರು ಎಂದು ಹೇಳಿದ ಕಾರಣ, ನನಗೆ ಆರೋಪಿತರ ಬಗ್ಗೆ ತಿಳಿದಿರುತ್ತದೆ ಎಂದರೆ ಸರಿ. ಹಾಗೆ ಫೋಟೋ ನಿಲ್ಲಲು ಹೇಳಿದ ಕಾರಣ ಮತ್ತು ದಾಖಲೆಗಳಿಗೆ ಸಹಿ ಮಾಡಲು ಹೇಳಿದ ಕಾರಣ ನಾನು ಫೋಟೋಗೆ ನಿಂತಿದ್ದು, ದಾಖಲೆಗಳಿಗೆ ಸಹಿ ಮಾಡಿದ್ದೇನೆ ಎಂದರೆ ಸರಿ. ನನ್ನ ಸಮಕ್ಷಮ ಆರೋಪಿತರು ತಾವು ಕಳ್ಳತನ ಮಾಡಿದ್ದೇವೆ ಎಂದು ಒಪ್ಪಿದ್ದಾಗಲೀ ಅಥವಾ ಕೃತ್ಯ ಮಾಡಿದ ಸ್ಥಳವನ್ನು ತೋರಿಸಿರುವುದಿಲ್ಲ. ಹಾಗೆ ಗೇರುಬೀಜಗಳನ್ನು ಎಲ್ಲಿ ಮಾರಾಟ ಮಾಡಿದ್ದೇವೆ ಎಂದು ಕೂಡ ನಮಗೆ ತಿಳಿಸಿರುವುದಿಲ್ಲ. ನಿಪಿ - 9 ರಲ್ಲಿ ಏನು ಬರೆದಿದ್ದಾರೆ ಎಂದು ನನಗೆ ತಿಳಿದಿಲ್ಲ.

<u>ಪಾಟೀ ಸವಾಲುಃ</u> 2 ಮತ್ತು 3 ನೇ ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅನುಮೋದಿಸುತ್ತಾರೆ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,

ಕಾರ್ಕಳ.